MVC No.529/2022
PW-1 ಸಪೋಟ
Date: 05.12.2024

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು 2 ನೇ ಎದುರುದಾರರ ಪರ ವಕೀಲರಿಂದಃ**

ನಾನು 3 ನೇ ತರಗತಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಸ್ವಂತ ಊರು ಮದ್ದನಕುಂಟ ಗ್ರಾಮ, ಮಡಕಶಿರಾ ತಾಲ್ಲೂಕು, ಆಂದ್ರಪ್ರದೇಶ ರಾಜ್ಯ. ಈಗ ಹಾಲಿ ನಾನು ಯಾವುದೇ ಕೆಲಸ ಮಾಡುತ್ತಿಲ್ಲ. ಮೊದಲು ನಾನು ಕೂಲಿ ಕೆಲಸ ಮಾಡುತ್ತಿದ್ದೆನು. ಅಪಘಾತವಾದ ಸಮಯದಲ್ಲಿ ನಾನು ಟಿವಿಎಸ್ ಎಕ್ಸ್ ಎಲ್ ವಾಹನದಲ್ಲಿ ಹೋಗುತ್ತಿದ್ದೆನು. ನಾನು ಗೌರಸಮುದ್ರ ಗ್ರಾಮದಿಂದ ಮದ್ದನಕುಂಟ ಗ್ರಾಮಕ್ಕೆ ಹೋಗುತ್ತಿದ್ದೆನು. ಸದರಿ ವಾಹನ ನನ್ನ ಸಂಬಂದಿಕರಾದ ಮಂಜು ರವರ ಹೆಸರಿನಲ್ಲಿ ಇದೆ. ಸದರಿ ವಾಹನದಲ್ಲಿ ನಾನು, ನನ್ನ ಅಣ್ಣ ರಾಮು ಮತ್ತು ನನ್ನ ಮಗ ಹೋಗುತ್ತಿದ್ದೆವು. ಪೊಲೀಸರು ಸಲ್ಲಿಸಿದ ದೋಷಾರೋಪಣ ಪಟ್ಟಿಯನ್ನು ನಾನು ನೋಡಿರುತ್ತೇನೆ. ಸದರಿ ದೋಷಾರೋಪಣ ಪಟ್ಟಿಯಲ್ಲಿ ನನಗೂ ಕೂಡ ಡ್ರೈವಿಂಗ್ ಲೈಸೆನ್ಸ್ ಇಲ್ಲದೆ ವಾಹನ ಚಾಲನೆ ಮಾಡಿದ್ದಕ್ಕಾಗಿ ಎರಡನೇ ಆರೋಪಿಯಾಗಿ ಕಾಣಿಸಲಾಗಿದೆ ಎಂದರೆ ಸರಿ. ವಾಹನದ ಮಾಲೀಕರಿಗೂ ಕೂಡ ಮೂರನೇ ಆರೋಪಿಯಾಗಿ ಸೇರ್ಪಡಿಸಲಾಗಿದೆ ಎಂದರೆ ಸರಿ. ನಾನು ಚಲಾಯಿಸುತ್ತಿದ್ದ ವಾಹನದ ನೊಂದಣಿ ಸಂಖ್ಯೆ ನನಗೆ ಹೇಳಲಾಗುವುದಿಲ್ಲ. ಸದರಿ ವಾಹನ ನೊಂದಣಿ ಆಗಿರಲಿಲ್ಲ ಎಂದರೆ ನನಗೆ ಗೊತ್ತಿರಲಿಲ್ಲ. ಅಪಘಾತವಾದ ಸ್ಥಳ ಆಲದಹಳ್ಳಿ ಗೇಟ್ ಆಗಿರುತ್ತದೆ. ಆಲದಹಳ್ಳಿ ಗೇಟ್ ರಸ್ತೆ ರಾಷ್ಟ್ರೀಯ ಹೆದ್ದಾರಿಗೆ ಸೇರುತ್ತದೆ ಎಂದರೆ ಸರಿ. ಸ್ಥಳದಲ್ಲಿ ನಾನು ಯಾವುದೇ ಸಿಗ್ನಲ್ ನೀಡದೆ ನಾನು ಏಕಾ ಏಕಿ ಆಲದಹಳ್ಳಿ ಗೇಟ್ ಬಳಿ ತಿರುವು ತೆಗೆದಕೊಂಡೆನು ಎಂದರೆ ಸರಿಯಲ್ಲ. ನನಗೆ ಯಾವುದೇ ಚಾಲನಾ ಪರವಾನಿಗೆ ಪತ್ರ ಇಲ್ಲದೆ ಮೂರು ಜನರು ಸದರಿ ವಾಹನದಲ್ಲಿ ಪ್ರಯಾಣಿಸಿದ ಕಾರಣ ನನಗೆ ಆಯಾ ತಪ್ಪಿ ನನ್ನ ತಪ್ಪಿನಿಂದ ಅಪಘಾತ ಸಂಬವಿಸಿರುತ್ತದೆ ಎಂದರೆ ಸರಿಯಲ್ಲ. ಲಾರಿ ಚಾಲಕನ ತಪ್ಪಿನಿಂದ ಯಾವುದೇ ಅಪಘಾತ ಸಂಬವಿಸಿಲ್ಲ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ಎರಡನೇ ಎದುರುದಾರರು ಯಾವುದೇ ಪರಿಹಾರದ ಹಣವನ್ನು ಕೊಡುವ ಬಾದ್ಯಸ್ತಿಕೆಯನ್ನು ಹೊಂದಿರೆ ಎಂದರೆ ಸರಿಯಲ್ಲ.

ನನ್ನ ಎಡಗಾಲಿಗೆ ಹೊರತುಪಡಿಸಿ ಬೇರೆ ಎಲ್ಲೂ ಗಾಯ ಆಗಿಲ್ಲ ಎಂದರೆ ಸರಿ. ಅಪಘಾತವಾದ ನಂತರ ಮೊದಲು ನಾನು ಚಳ್ಳಕೆರೆಯ ಖಾಸಗಿ ಆಸ್ಪತ್ರೆಗೆ ಹೋದೆನು. ನಂತರ ಚಿತ್ರದುರ್ಗದ ಖಾಸಗಿ ಆಸ್ಪತ್ರೆಗೆ ಹೋದೆನು. ನನಗೆ ಸದರಿ ಆಸ್ಪತ್ರೆಗಳ ಹೆಸರು ಹೇಳಲಾಗುವುದಿಲ್ಲ. ನಿಪಿ 14 ರಲ್ಲಿ ವೈದ್ಯರ ಸೀಲ್ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲಾತಿಯನ್ನು ನಾನು ಸೃಷ್ಟಿ ಮಾಡಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ನನಗೆ ಚಿತ್ರದುರ್ಗದಲ್ಲಿ ಚಿಕಿತ್ಸೆ ನೀಡಿದ ವೈದ್ಯರ ಹೆಸರು ಹೇಳಲಾಗುವುದಿಲ್ಲ. ಚಿತ್ರದುರ್ಗದ ಆಸ್ಪತ್ರೆಗೆ ಕೊನೆಯಬಾರಿ ನಾನು ಯಾವಾಗ ಹೋಗಿದ್ದೆ ಎಂದು ನನಗೆ ಹೇಳಲಾಗುವುದಿಲ್ಲ. ಅಂಗನ್ಯೂನತೆ ಪ್ರಮಾಣ ಪತ್ರವನ್ನು ಯಾವ ಕಾರಣಕ್ಕಾಗಿ ನೀಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅದು ನನ್ನ ವಕೀಲರಿಗೆ ಗೊತ್ತು. ಹೆಚ್ಚಿನ ಪರಿಹಾರಗೊಸ್ಕರ ನಿಪಿ 20 ಅಂಗನ್ಯೂನತೆ ಪ್ರಮಾಣ ಪತ್ರವನ್ನು ಸೃಷ್ಟಿ ಮಾಡಿ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ನಾನು ಮೊದಲು ಹಾಗೇ ಈಗಲೂ ಕೂಡ ಆರೋಗ್ಯವಾಗಿ ಇದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಊರುಗೋಲು ಸಹಾಯವನ್ನು ಪಡೆಯದೆ ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದರೆ ಸರಿ. ನನ್ನ ಕಾಲು ಚೆನ್ನಾಗಿ ಇರುವ ಕಾರಣ ನಾನು ನಿಂತುಕೊಂಡು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ತೊಂದರೆ ಇರದೇ ಇರುವುದರಿಂದ ಅರ್ಜಿಯಲ್ಲಿ ಅಥವಾ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸದರಿ ವಿಚಾರವನ್ನು ನಾನು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವ ಕಾಲಕ್ಕೂ ಕೆಲಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಲಾರಿ ಚಾಲಕನಿಗೆ ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಮತ್ತು ಪರ್ಮಿಟ್ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ವೈದ್ಯಕೀಯ ಬಿಲ್ ಗಳನ್ನು ಪರಿಹಾರಗೋಸ್ಕರ ಸೃಷ್ಟಿ ಮಾಡಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಳ್ಳಕೆರೆ.